<u>ಕರ್ನಾಟಕ ಸರ್ಕಾರ</u>

ಸಂಖ್ಯೆ : ಆಇ 48 ಜಿಐಇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ 15.06.2020

ಮಾನ್ಯರೇ,

ವಿಷಯ : ಬಾಕಿ ವೇತನ ಮತ್ತು ವೇತನ ಭತ್ಯೆಗಳನ್ನು ಪಾವತಿಸಲು ಅನುದಾನ ಒದಗಿಸುವ ಬಗ್ಗೆ.

*******

ಪ್ರತಿ ವರ್ಷ ಆಯವ್ಯಯದಲ್ಲಿ ಎಲ್ಲಾ ಸರ್ಕಾರದ ಸೇವೆಯಲ್ಲಿ ಇರುವ ಅಧಿಕಾರಿ/ ನೌಕರರ ವೇತನ, ಭತ್ಯೆಗಳಿಗೆ ಅಗತ್ಯವಾದಷ್ಟು ಅನುದಾನವನ್ನು ಇಲಾಖಾವಾರು ಮತ್ತು ಲೆಕ್ಕ ಶೀರ್ಷಿಕೆವಾರು ಒದಗಿಸಲಾಗುತ್ತದೆ. ಈ ಅನುದಾನವನ್ನು ಉಪಯೋಗಿಸಿಕೊಂಡು ನೌಕರರ ವೇತನ, ಭತ್ಯೆಗಳನ್ನು ವಿಳಂಬ ಮಾಡದೇ ಆಯಾ ಆರ್ಥಿಕ ವರ್ಷದಲ್ಲೇ ಪಾವತಿಸುವುದು ಸಂಬಂಧಿಸಿದ ಇಲಾಖಾ ಅಧಿಕಾರಗಳ ಜವಾಬ್ದಾರಿ ಮತ್ತು ಕರ್ತವ್ಯ.

ಅದರಂತೆಯೇ 2019-20 ನೇ ಸಾಲಿನ ಆಯವ್ಯಯದಲ್ಲಿ, ಸರ್ಕಾರದ ಸೇವೆಯಲ್ಲಿ ಇರುವ ಅಧಿಕಾರಿ/ ನೌಕರರ ವೇತನ ಪಾವತಿಸಲು ಅವಶ್ಯವಿರುವ ಅನುದಾನವನ್ನು ಒದಗಿಸಲಾಗಿತ್ತು. ಹಲವಾರು ಇಲಾಖೆಗಳ ವೇತನ ಮತ್ತು ಬಟವಾಡೆ ಅಧಿಕಾರಿಗಳು (DDO) ತಮ್ಮ ಅಧೀನದಲ್ಲಿನ ಸಿಬ್ಬಂದಿಯ ವೇತನವನ್ನು ನಿಗಧಿತ ಕಾಲಮಿತಿಯೊಳಗೆ ಸೆಳೆಯದೆ ಇರುವುದರಿಂದ, ವೇತನ ಮತ್ತು ವೇತನ ಭತ್ಯಗಳಿಗೆ ಮೀಸಲಿಟ್ಟಿದ್ದ ಅನುದಾನವು ವ್ಯಪಗತ (Lapse) ಆಗಿರುತ್ತದೆ. ಇದರಿಂದ ಹಿಂದಿನ ವರ್ಷಗಳ ವೇತನದ ವೆಚ್ಚದ ಹೊರೆ ಪ್ರಸ್ತಕ ಸಾಲಿನ ಆಯವ್ಯಯದ ಮೇಲೆ ಪರಿಣಾಮ ಬೀರುತ್ತದೆ.

2019-20 ನೇ ಸಾಲಿನ ಬಾಕಿ ವೇತನ ಮತ್ತು ವೇತನ ಭತ್ಯೆಗಳನ್ನು ಪಾವತಿಸಲು ಹೆಚ್ಚುವರಿ ಅನುದಾನವನ್ನು ಕೋರಿ, ಆಡಳಿತ ಇಲಾಖೆಗಳು ಸಿಬ್ಬಂದಿವಾರು 2020-21 ನೇ ಸಾಲಿನಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸುತ್ತಿರುವುದನ್ನು ಆರ್ಥಿಕ ಇಲಾಖೆಯು ಗಮನಿಸಿದೆ.

2020-21 ನೇ ಸಾಲಿನ ಆಯವ್ಯಯದಲ್ಲಿ, ಪ್ರಸಕ್ತ ಸಾಲಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಮಾತ್ರ ವೇತನ ಮತ್ತು ಭತ್ಯೆಗಳಿಗೆ ಅಗತ್ಯವಾದ ಅನುದಾನವನ್ನು ಒದಗಿಸಲಾಗಿದೆ. 2019-20 ಮತ್ತು ಹಿಂದಿನ ಸಾಲಿನ ವೇತನ ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಹೆಚ್ಚುವರಿ ಅನುದಾನ ಒದಗಿಸಬೇಕಾಗುತ್ತದೆ. ಈ ರೀತಿ ಪ್ರತ್ಯೇಕ ಪ್ರಸ್ತಾವನೆಗಳು ಸಲ್ಲಿಸಿದಲ್ಲಿ ಸಮಗ್ರ ಮಾಹಿತಿ ಲಭ್ಯವಿಲ್ಲದೇ ಇಲಾಖೆಗಳಿಗೆ ವೇತನ ಮತ್ತು ಭತ್ಯೆಗಳಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನದ ನಿಖರವಾದ ಅಂದಾಜು ಮಾಡಲು ಸಾಧ್ಯವಿಲ್ಲ. ಇದರಿಂದ ಅನಾವಶ್ಯಕ ಆಡಳಿತ ಸಮ್ಯೆಸ್ಯೆಗಳು ಉದ್ಬವಿಸುತ್ತವೆ.

ಅದುದರಿಂದ, ಆಡಳಿತ ಇಲಾಖೆಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಇಲಾಖೆಗಳಿಂದ ವೇತನ ಮತ್ತು ಭತ್ಯೆಗಳ ವಿವರಗಳನ್ನು ಅಂದರೆ ಎಷ್ಟು ಮಂದಿಗೆ, ಯಾವ ಮಾಹೆಯಿಂದ ಬಾಕಿ ಇದೆ, ಎಷ್ಟು ಅನುದಾನದ ಅವಶ್ಯಕತೆ ಇದೆ, ವೇತನವಲ್ಲದೇ ಯಾವ ಭತ್ಯೆಯ ಪಾವತಿಯ ಬಾಕಿಗೆ ಅನುದಾನ ಅಗತ್ಯವಿದೆ, ಯಾವ ಕಾರಣಕ್ಕೆ ವೇತನ & ಭತ್ಯೆ ಸೆಳೆದು ಪಾವತಿಸಲು ಸಾಧ್ಯವಾಗಿರುವುದಿಲ್ಲ ಮತ್ತು ಇದಕ್ಕೆ ಜವಾಬ್ದಾರರು ಯಾರು ಇತ್ಯಾದಿ ಮಾಹಿತಿಗಳೊಂದಿಗೆ ಲೆಕ್ಕ

ಶೀರ್ಷಿಕೆವಾರು ವಿವರಗಳನ್ನು ಕ್ರೋಡೀಕರಿಸಿ ಲೆಕ್ಕಚಾರದ (**Soft copy / Hard copy**) ವಿವರಗಳೊಂದಿಗೆ ದೃಡೀಕರಿಸಿ ಏಕೈಕ ಕ್ರೋಡೀಕೃತ ಪ್ರಸ್ತಾವನೆ ಸಲ್ಲಿಸುವಂತೆ ಆಡಳಿತ ಇಲಾಖೆಗೆ ತಿಳಿಸಿದೆ. ಈ ರೀತಿ ಸಲ್ಲಿಸಿದ ಕ್ರೋಡೀಕೃತ ಪ್ರಸ್ತಾವನೆಯಲ್ಲಿ ಬಾಕಿ ಪಾವತಿಸಬೇಕಾದ ಎಲ್ಲಾ ಪ್ರಕರಣಗಳು ಮತ್ತು ಮೊತ್ತ ಒಳಗೊಂಡಿದೆ ಎಂಬುದನ್ನು ಪ್ರಮಾಣಿಕರಿಸುವಂತೆ ತಿಳಿಸಿದೆ. ಯಾವುದೇ ಪ್ರಕರಣಗಳು ಬಿಟ್ಟು ಹೋದಲ್ಲಿ ಇಲಾಖೆಗಳೇ ಜವಾಬ್ದಾರಾಗುತ್ತಾರೆ.

ಅನಂತರ ಸಲ್ಲಿಸುವ ಯಾವುದೇ ಪ್ರಸ್ತಾವನೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

23/6

(ಡಾ॥ ಏಕ್‌ರೂಪ್ ಕೌರ್)

ಕಾರ್ಯದರ್ಶಿ (ಆ&ಸಂ)

ಆರ್ಥಿಕ ಇಲಾಖೆ

ಇವರಿಗೆ:

ಎಲ್ಲಾ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ / ಇಲಾಖಾ ಮುಖ್ಯಸ್ಥರು